ಗಂಟೆ ಮೀರಿದಲ್ಲಿ ಕಾರ್ಡ ಲಾಕ್ ಆಗುವುದು, ಲಾಕ್ ಆದ ಕಾರ್ಡನ್ನು ಮರುಚಾಲ್ತಿ ಮಾಡಿಸಲು ಟ್ಯಾಪ್ ಇನ್ Tap in (ಪ್ರಯಾಣ ಪ್ರಾರಂಭವಾದ) ಆದ ನಂತರದ ಸಮಯದಿಂದ ಗಂಟೆಗಳನ್ನು ಲೆಕ್ಕಾಚಾರ ಮಾಡಿ ಪ್ರತಿ ಒಂದು ತಾಸಿಗೆ 10 ರೂ ರಂತೆ ಗರಿಷ್ಠ ರೂ. 76/– ಗಳವರೆಗೆ ದಂಡ ಶುಲ್ಕವೆಂದು ಪರಿಗಣಿಸಿ ನಿಲ್ದಾಣದಲ್ಲಿ ಪಾವತಿಸುವುದು.

6. ರಿಯಾಯಿತಿ ಮತ್ತು ವಿದ್ಯಾರ್ಥಿಗಳ ಪಾಸ್ ಸ್ಮಾರ್ಟಕಾರ್ಡನಿಂದ ಕಡ್ಡಾಯವಾಗಿ ನಿಗದಿತ (Source) ಸ್ಥಳದಿಂದ ನಿಗದಿತ (Destination) ಸ್ಥಳಕ್ಕೆ ಮಾತ್ರ ಪ್ರಯಾಣಿಸಲು ಅವಕಾಶವಿರುವುದು ಹೊರತಾಗಿ ಮುಂದಿನ ಬಸ್ ನಿಲ್ದಾಣಕ್ಕೆ ಪ್ರಯಾಣಿಸಲು ಅವಕಾಶವಿರುವುದಿಲ್ಲ. ಹಾಗೇನಾದರೂ ಪ್ರಯಾಣ ಮಾಡಿದ್ದಲ್ಲಿ ಮುಂದಿನ ನಿಲ್ದಾಣದಲ್ಲಿ ಫೇರ್‌ಗೇಟ್ ತೆರೆದುಕೊಳ್ಳುವುದಿಲ್ಲ. ಅಂತಹ ಸಮಯದಲ್ಲಿ ರೂ. 260/– ಗಳ ದಂಡ ವಿಧಿಸಲಾಗುವುದು .

7. ಯಾವುದೇ ಸಮಸ್ಯೆಗಳು ಕಂಡುಬಂದಲ್ಲಿ ಬಿಆರ್‌ಟಿಎಸ್ ಸಿಬ್ಬಂದಿಗಳನ್ನು ಸಂಪರ್ಕಿಸುವುದು ಅಥವಾ ಉಚಿತ ಸಹಾಯವಾಣಿಗೆ 18005991010 ಕರೆ ಮಾಡಬಹುದು

8. ಸ್ಮಾರ್ಟಕಾರ್ಡ ಹೊಂದಿದ ಪ್ರಯಾಣಿಕರು ಪ್ರಯಾಣದ ಸಮಯದಲ್ಲಿ ಸಂಬಂಧಪಟ್ಟ ತನಿಖಾಧಿಕಾರಿಗಳು ಕೇಳಿದಾಗ ಕಾರ್ಡ ತೋರಿಸಿ ತನಿಖೆಗೆ ಸಹಕರಿಸಬೇಕು.

9. ಪ್ರಯಾಣಿಕರು ತಾವು ಖರೀದಿಸಿದ ಸ್ಮಾರ್ಟಕಾರ್ಡನ್ನು ಕಾಪಾಡಿಕೊಳ್ಳುವ ಜವಾಬ್ದಾರಿ ತಮ್ಮದಾಗಿದ್ದು, ಮತ್ತೊಬ್ಬ ವ್ಯಕ್ತಿಯಿಂದ ಬಳಕೆಯಾಗಿ ಸ್ಮಾರ್ಟ ಕಾರ್ಡನಲ್ಲಿರುವ ಮೊತ್ತ ಕಡಿತಗೊಂಡಲ್ಲಿ ಅದಕ್ಕೆ ಇಲಾಖೆ/ಸಂಸ್ಥೆಯ ಹೊಣೆಯಿರುವುದಿಲ್ಲ.

## ಪ್ರಯಾಣಿಕರ ಸ್ಮಾರ್ಟಕಾರ್ಡಗಳ ಬದಲಾವಣೆ

(Replacement of Smart Card)




ಒಂದು ವೇಳೆ ತಾಂತ್ರಿಕ ದೋಷದಿಂದ (Technical Error) ಸ್ಮಾರ್ಟಕಾರ್ಡ ಕಾರ್ಯ ನಿರ್ವಹಿಸದೇ ಇದ್ದಲ್ಲಿ ಮಾತ್ರ ಸ್ಮಾರ್ಟಕಾರ್ಡನ್ನು ಉಚಿತವಾಗಿ ಬದಲಿಸಲು ಅನುಮತಿ ಇದೆ ಈ ಪ್ರಕರಣದಲ್ಲಿ ಹೆಚ್ಚುವರಿ ಶುಲ್ಕವಿಲ್ಲದೆ ಕಾರ್ಡನ್ನು ಬದಲಾಯಿಸಲಾಗುತ್ತದೆ ಮತ್ತು ಕಾರ್ಡನಲ್ಲಿರುವ ಬಾಕಿ ಮೊತ್ತವನ್ನು ಹೊಸ ಕಾರ್ಡಿಗೆ ವರ್ಗಾವಣೆ ಮಾಡಲಾಗುವುದು. ಒಂದು ವೇಳೆ ಪ್ರಯಾಣಿಕರ ನಿರ್ಲಕ್ಷದಿಂದಾಗಿ ಸದರಿ ಕಾರ್ಡ ಭೌತಿಕವಾಗಿ ಹಾನಿ (Physically Damage) ಆದಲ್ಲಿ ಯಾವುದೇ ಸೌಲಭ್ಯಗಳು ದೊರಕುವುದಿಲ್ಲ.

https ://twitter.com.HDBRTS

## ಸ್ಮಾರ್ಟಕಾರ್ಡ ವಿತರಣಾ ಸ್ಥಳಗಳು :

1. ಹುಬ್ಬಳ್ಳಿ ನಗರ ಸಾರಿಗೆ ಬಸ್ ನಿಲ್ದಾಣ
2. ಹುಬ್ಬಳ್ಳಿ ಕೇಂದ್ರೀಯ ಬಸ್ ನಿಲ್ದಾಣ
3. ಧಾರವಾಡ ಬಿ.ಆರ್.ಟಿ.ಎಸ್. (ಮಿತ್ರ ಸಮಾಜ) ಬಸ್ ನಿಲ್ದಾಣ

## ಉದ್ದೇಶಿತ ವಿತರಣಾ ಸ್ಥಳಗಳು :

1. ಧಾರವಾಡ ಹೊಸ ಬಸ್‌ನಿಲ್ದಾಣ

## ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಬಹುದು (For more information please contact below)

1. ಹೆಚ್‌ಡಿಬಿಆರ್‌ಟಿಎಸ್ ಉಚಿತ ಸಹಾಯವಾಣಿ ಸಂಖ್ಯೆ: 18005991010
2. ವೆಬ್ ಪೋರ್ಟಲ್ ವಿಳಾಸ: www.hdbrts.com
3. ಅಹವಾಲುಗಳ ಸ್ವೀಕೃತಿ ಇ–ಮೇಲ್ ವಿಳಾಸ: hdbrts.grievance@gmail.com
4. ಬಸ್ ನಿಲ್ದಾಣದ ಟಿಕೇಟ್ ಕೌಂಟರ್‌ಗಳು
5. ಚಿಗರಿ ಆ್ಯಪ್ (Chigari App)

* ವಿ.ಸೂ: ಮೇಲ್ಕಾಣಿಸಿದ ವಿಷಯಗಳು ಸಂದರ್ಭಕ್ಕೆ ಅನುಗುಣವಾಗಿ ಪ್ರಯಾಣಿಕರ ಯಾವುದೇ ಮುನ್ಸೂಚನೆ ಇಲ್ಲದೇ ಬದಲಾವಣೆಗೆ ಒಳಪಡುತ್ತವೆ.

## ಹೆಚ್‌ಡಿಆರ್‌ಟಿಎಸ್ ಬಸ್ಸು ಮಾರ್ಗಗಳ ವಿವರ

| ಮಾರ್ಗಗಳ ವಿವರ | ಯಿಂದ | ವರೆಗೆ |
|---|---|---|
| 200 A | ಸಿಬಿಟಿ ಹುಬ್ಬಳ್ಳಿ | ಧಾರವಾಡ ಬಿಆರ್‌ಟಿಎಸ್ ಟರ್ಮಿನಲ್ **ಎಲ್ಲಾ ನಿಲುಗಡೆ** |
| 201B | ರೈಲ್ವೆ ನಿಲ್ದಾಣ ಹುಬ್ಬಳ್ಳಿ | ಧಾರವಾಡ ಹೊಸ ಬಸ್ ನಿಲ್ದಾಣ **ಎಲ್ಲಾ ನಿಲುಗಡೆ** |
| 200 D | ಹಳೆ ಬಸ್ ನಿಲ್ದಾಣ ಹುಬ್ಬಳ್ಳಿ | ಧಾರವಾಡ ಬಿಆರ್‌ಟಿಎಸ್ ಟರ್ಮಿನಲ್. **ಎಲ್ಲಾ ನಿಲುಗಡೆ** |
| 100 D | ಹಳೆ ಬಸ್ ನಿಲ್ದಾಣ ಹುಬ್ಬಳ್ಳಿ | ಧಾರವಾಡ ಬಿಆರ್‌ಟಿಎಸ್ ಟರ್ಮಿನಲ್. **ನಿಯಮಿತ ನಿಲುಗಡೆ :** ಹೊಸೂರು ವೃತ್ತ, ಕಿಮ್ಸ, ನವನಗರ, ಎಸ್‌ಡಿಎಂ ಮೆಡಿಕಲ್, ಟೋಲ್ ನಾಕ, ಎನ್‌ಟಿಟಿಎಫ್, ಕೋರ್ಟ ವೃತ್ತ, ಜುಬ್ಲಿ ವೃತ್ತ. |

**ಶೀಘ್ರ, ಸುರಕ್ಷಿತ, ಸುಖಕರ ಪ್ರಯಾಣಕ್ಕಾಗಿ ಹೆಚ್–ಡಿ ಬಿಆರ್‌ಟಿಎಸ್**



ಕರ್ನಾಟಕ ಸರ್ಕಾರ

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

# ಹುಬ್ಬಳ್ಳಿ–ಧಾರವಾಡ ಬಿ.ಆರ್.ಟಿ.ಎಸ್. ಕಂಪನಿ ನಿಯಮಿತ, ಹುಬ್ಬಳ್ಳಿ



# ಸಾರ್ವಜನಿಕರಿಗೆ ಹೆಚ್ ಡಿ ಬಿಆರ್‌ಟಿಎಸ್ ಸ್ಮಾರ್ಟಕಾರ್ಡ ಬಗ್ಗೆ ಮಾಹಿತಿ






**ಒಟ್ಟಾರೆ ಸಮಯ, ಹಣ ಮತ್ತು ಶ್ರಮದ ಉಳಿತಾಯ**

# ಹುಬ್ಬಳ್ಳಿ–ಧಾರವಾಡ ಬಿಆರ್‌ಟಿಎಸ್ ಕಂಪನಿ ನಿಯಮಿತ, ಹುಬ್ಬಳ್ಳಿ

## ಸಾರ್ವಜನಿಕರಿಗೆ ಹೆಚ್ ಡಿ ಬಿಆರ್‌ಟಿಎಸ್ ಸ್ಮಾರ್ಟಕಾರ್ಡ ಬಗ್ಗೆ ಮಾಹಿತಿ




ಹುಬ್ಬಳ್ಳಿ–ಧಾರವಾಡ ಬಿಆರ್‌ಟಿಎಸ್ ಯೋಜನೆಯು ಸಾರ್ವಜನಿಕರ ಪ್ರಯಾಣಕ್ಕಾಗಿ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ ಅದರಲ್ಲಿ ಸ್ಮಾರ್ಟಕಾರ್ಡ ಕೂಡ ಒಂದು. ಹುಬ್ಬಳ್ಳಿ–ಧಾರವಾಡ ಬಿ.ಆರ್.ಟಿ.ಎಸ್. ಮಾರ್ಗದಲ್ಲಿ ಪ್ರಯಾಣಿಸಲು ಬಹುನಿರೀಕ್ಷಿತ ಈ ಸ್ಮಾರ್ಟಕಾರ್ಡನ್ನು ಹಲವಾರು ಸೌಲಭ್ಯಗಳೊಂದಿಗೆ ಸಾರ್ವಜನಿಕ ಪ್ರಯಾಣಕ್ಕಾಗಿ ವಿತರಿಸಲಾಗುತ್ತದೆ.

## ಸ್ಮಾರ್ಟಕಾರ್ಡಗಳ ವೈಶಿಷ್ಟ್ಯ ಮತ್ತು ಉಪಯೋಗಗಳು

## (Features & Uses of smart Card)

1. ಟಿಕೇಟ್ ಕೌಂಟರ್‌ಗಳಲ್ಲಿ ಸಾಲಿನಲ್ಲಿ ನಿಂತು ಟಿಕೇಟ್ ತೆಗೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ.
2. ಕಾಗದ ರಹಿತ ವಹಿವಾಟು ಮತ್ತು ಪರಿಸರ ಹಾಗೂ ಕುಟುಂಬ ಸ್ನೇಹಿ.
3. ಬಿಆರ್‌ಟಿಎಸ್ ಬಸ್ ನಿಲ್ದಾಣಗಳಲ್ಲಿ ಪ್ರವೇಶ ಮತ್ತು ನಿರ್ಗಮನ ಅತಿ ಸುಲಭ
4. ಒಂದು ದಿನದಲ್ಲಿ ಎಷ್ಟುಬಾರಿಯಾದರೂ ಪ್ರಯಾಣಿಸಬಹುದು.
5. ನಗದು ರಹಿತ ಪ್ರಯಾಣಕ್ಕೆ ಅನುಕೂಲವಾಗಿದೆ.
6. ಖರೀದಿಸಿದ ಸ್ಮಾರ್ಟಕಾರ್ಡ 5 ವರ್ಷದ ಅವಧಿಯನ್ನು ಹೊಂದಿರುತ್ತದೆ. (ವಿದ್ಯಾರ್ಥಿ ಪಾಸ್ ಸ್ಮಾರ್ಟ ಕಾರ್ಡ ಹೊರತುಪಡಿಸಿ)

## ಸ್ಮಾರ್ಟಕಾರ್ಡನ್ನು ಬಳಸುವ ವಿಧಾನ (How to use Smart Card)



1. ಕಾರ್ಡನ್ನು ಹೊಂದಿದ ಪ್ರಯಾಣಿಕರು ಬಸ್‌ನಿಲ್ದಾಣದಲ್ಲಿ ಫೇರ್‌ಗೇಟ್‌ನಲ್ಲಿರುವ ಕಪ್ಪುಗ್ಲಾಸಿಗೆ ಸ್ಮಾರ್ಟಕಾರ್ಡ (ᯤ) ಗುರುತು ಚಿಹ್ನೆ ಇರುವಲ್ಲಿ ತೋರಿಸಿ Tap in ಮಾಡಿಕೊಂಡು ಒಳಗೆ ಪ್ರವೇಶಿಸಬೇಕು ಹಾಗೂ ಕಡ್ಡಾಯವಾಗಿ Tap out ಮಾಡಿಕೊಂಡು ಬಸ್ ನಿಲ್ದಾಣದಿಂದ ಹೊರಗೆ ಹೋಗಬೇಕು.
2. ಪ್ರಯಾಣಿಕರು ಸರದಿ ಸಾಲಿನಲ್ಲಿ ನಿಂತು ಫೇರ್‌ಗೇಟಿನ ಹತ್ತಿರವಿರುವ ಹಳದಿ ಪಟ್ಟಿಯ ಹಿಂದೆ ನಿಂತು ಒಬ್ಬೊಬ್ಬರಾಗಿ ಸ್ಕ್ಯಾನ್ ಮಾಡಿ ಫೇರ್‌ಗೇಟುಗಳು ತೆರೆದ ನಂತರ ಬಸ್ ನಿಲ್ದಾಣಕ್ಕೆ ಪ್ರವೇಶಿಸಬೇಕು ಮತ್ತು ನಿರ್ಗಮಿಸಬೇಕು.

## ಸ್ಮಾರ್ಟಕಾರ್ಡ ವಿಧಗಳು (Types of Smart Card)

1. ಇ–ಪರ್ಸ ಸ್ಮಾರ್ಟಕಾರ್ಡ (E-Purse Smart Card)
2. ರಿಯಾಯಿತಿ ಪಾಸ್ ಸ್ಮಾರ್ಟಕಾರ್ಡ (Concessional Pass Smart Card)
3. ವಿದ್ಯಾರ್ಥಿಗಳ ಪಾಸ್ ಸ್ಮಾರ್ಟಕಾರ್ಡ (Student Pass Smart Card)

## ಇ–ಪರ್ಸ ಸ್ಮಾರ್ಟಕಾರ್ಡ (E-Purse Smart Card):




ಪ್ರಯಾಣಿಕರು ಚೀಟಿಗಳ (Ticket) ಬದಲಾಗಿ ಪ್ರಯಾಣಿಸಲು ಇ–ಪರ್ಸ(E-Purse)ಗಳನ್ನು ಬಳಸಬಹುದಾಗಿದೆ. ಇದು ಪ್ರೀ ಪೇಡ್ (Pre-paid) ಕಾರ್ಡಆಗಿದ್ದು ಇದನ್ನು ಕುಟುಂಬದ ಯಾವುದೇ ಸದಸ್ಯರು ಹುಬ್ಬಳ್ಳಿ–ಧಾರವಾಡಗಳ ಬಿಆರ್‌ಟಿಎಸ್ ಮಾರ್ಗದ ಯಾವುದೇ ಬಸ್ ನಿಲ್ದಾಣದಲ್ಲಿ ಹತ್ತಲು ಹಾಗೂ ಇಳಿಯಲು ಬಳಸಬಹುದಾಗಿದೆ. ಸಹ ಪ್ರಯಾಣಿಕರಿಗೆ ಕೂಡ ಈ ಕಾರ್ಡನಿಂದ ಟಿಕೇಟ್ ಖರೀದಿಸಬಹುದು. ಒಂದು ದಿನದಲ್ಲಿ ಎಷ್ಟುಬಾರಿಯಾದರೂ ಪ್ರಯಾಣಿಸಬಹುದು. ಅತಿ ಸುಲಭವಾಗಿ Online (ವೆಬ್‌ಪೋರ್ಟಲ್ www.hdbrts.com ಅಥವಾ ಚಿಗರಿ ಆ್ಯಪ್ (Chigari App) ಮತ್ತು Offline ಟಿಕೇಟ್ ಕೌಂಟರ್‌ನಲ್ಲಿ ಕನಿಷ್ಠ ರೂ. 50/– ಗರಿಷ್ಠ– ರೂ. 1800 ಗಳವರೆಗೆ Re-Charge ಮಾಡಿಸಬಹುದು. ಸ್ಮಾರ್ಟ ಕಾರ್ಡ ಖರೀದಿಸುವಾಗ ರೂ. 200 ಪಾವತಿಸಿ ಸ್ಮಾರ್ಟ ಕಾರ್ಡನ್ನು ಪಡೆಯಬಹುದಾಗಿದೆ. ಪ್ರತಿ ರಿಚಾರ್ಜ್‌ಗೆ ಅಕರ್ಷಕ ಬೋನಸ್ ಸಹ ನೀಡಲಾಗುವದು. ಇ–ಪರ್ಸ ಸ್ಮಾರ್ಟಕಾರ್ಡ ಖರೀದಿಸಲು ಫೋಟೊ ಮತ್ತಿತರೆ ದಾಖಲೆಗಳು ಬೇಕಾಗಿರುವುದಿಲ್ಲ. ಪ್ರಯಾಣಿಸುವ ಅಂತರದ ಆಧಾರದ ಮೇಲೆ ಹಣ ಕಡಿತವಾಗುವುದು. ಪ್ರಯಾಣಿಸಲು ಸ್ಮಾರ್ಟಕಾರ್ಡನಲ್ಲಿ ಕನಿಷ್ಠ ರೂ. 26/– ಗಳ ಬಾಕಿ ಇರಬೇಕು.

## ರಿಯಾಯಿತಿ ಪಾಸ್ ಸ್ಮಾರ್ಟಕಾರ್ಡ

## (Concessional Smart Card) Monthly Pass




ಪ್ರಯಾಣಿಕರು ಮಾಸಿಕ ರಿಯಾಯಿತಿ ದರದ ಪಾಸ್‌ನ ಬದಲಾಗಿ ಈ ರಿಯಾಯಿತಿ ಪಾಸ್ ಸ್ಮಾರ್ಟಕಾರ್ಡಗಳನ್ನು ಬಿಆರ್‌ಟಿಎಸ್ ಬಸ್ಸುಗಳಲ್ಲಿ ಪ್ರಯಾಣಿಸಲು ಉಪಯೋಗಿಸಬಹುದಾಗಿದೆ. ಅಧಿಕೃತವಾದ ದಾಖಲೆಗಳನ್ನು ಸಲ್ಲಿಸಿ ಇದನ್ನು ಪಡೆಯಬಹುದಾಗಿದ್ದು, ಮಾಸಿಕ ಶುಲ್ಕ ಪಾವತಿಸಿದ ನಿಗದಿತ 30 ದಿನಗಳ ಅವಧಿಗೆ ಮಾತ್ರ ಈ ಪಾಸ್ ಚಾಲ್ತಿಯಲ್ಲಿರುತ್ತದೆ, ಪ್ರತಿ ತಿಂಗಳು ನವೀಕರಿಸಿಕೊಳ್ಳಬೇಕು. ಅಧಿಕೃತವಾಗಿ ಪಾಸಗಳನ್ನು ಪಡೆದ ಪ್ರಯಾಣಿಕರನ್ನು ಹೊರತುಪಡಿಸಿ ಬೇರೆಯವರಿಗೆ ಇದನ್ನು ಬಳಸುವ ಅವಕಾಶವಿರುವುದಿಲ್ಲ. ನಿಗದಿತ(Source) ಸ್ಥಳದಿಂದ ಬಿಆರ್‌ಟಿಎಸ್ ಬಸ್ ಹತ್ತಿ ನಿಗದಿತ(Destination) ಸ್ಥಳಕ್ಕೆ ಮಾತ್ರ ಇಳಿಯಲು ಅವಕಾಶವಿರುವುದು.

## ವಿದ್ಯಾರ್ಥಿಗಳ ಪಾಸ್ ಸ್ಮಾರ್ಟಕಾರ್ಡ (Student Pass Smart Card):




ವಿದ್ಯಾರ್ಥಿ ರಿಯಾಯಿತಿ ಪಾಸ್‌ಗಳಿಗೆ ಅರ್ಹರಾದವರಿಗೆ ಬಿಆರ್‌ಟಿಎಸ್ ಬಸ್‌ನಲ್ಲಿ ಪ್ರಯಾಣಿಸಲು ವಿದ್ಯಾರ್ಥಿ ಸ್ಮಾರ್ಟಕಾರ್ಡಗಳನ್ನು ಬಳಸಬಹುದಾಗಿದೆ. ವಿದ್ಯಾರ್ಥಿಗಳು ಅಧಿಕೃತವಾದ ದಾಖಲಾತಿಗಳನ್ನು ಸಲ್ಲಿಸಿ ಪ್ರತಿ ವರ್ಷ ಶಾಲೆ/ಕಾಲೇಜಿನ ವಾರ್ಷಿಕ ಅವಧಿಗೆ ಮಾತ್ರ ಪಡೆದುಕೊಳ್ಳಬಹುದು. ಅಧಿಕೃತವಾಗಿ ಪಾಸಗಳನ್ನು ಪಡೆದ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಬೇರೆ ಯಾರಿಗೂ ಇದನ್ನು ಬಳಸುವ ಅವಕಾಶವಿರುವುದಿಲ್ಲ. ವಿದ್ಯಾರ್ಥಿಗಳು ನಿಗದಿತ (Source) ಸ್ಥಳದಿಂದ ಬಿಆರ್‌ಟಿಎಸ್ ಬಸ್ ಹತ್ತಿ ನಿಗದಿತ (Destination) ಸ್ಥಳಕ್ಕೆ ಮಾತ್ರ ಇಳಿಯಲು ಅವಕಾಶವಿರುವುದು. ವಿದ್ಯಾರ್ಥಿಗಳು ಸ್ಮಾರ್ಟಕಾರ್ಡಜೊತೆಯಲ್ಲಿ ಕಡ್ಡಾಯವಾಗಿ ಶಿಕ್ಷಣ ಸಂಸ್ಥೆಯ ಗುರುತಿನ ಚೀಟಿಯನ್ನು ಹೊಂದಿರತಕ್ಕದ್ದು. ವಿದ್ಯಾರ್ಥಿಗಳಿಗೆ ನಿಗದಿತ ನಿಲುಗಡೆ (Limited stop) ಮಾದರಿಯ ಬಸ್‌ನಲ್ಲಿ ಪ್ರಯಾಣಕ್ಕೆ ಅವಕಾಶವಿರುವುದಿಲ್ಲ,

## ವಿಶೇಷ ಸೂಚನೆಗಳು (Special Instructions)

1. ಒಂದು ಬಾರಿ ವಿತರಿಸಲಾದ ಸ್ಮಾರ್ಟಕಾರ್ಡ ಕಳೆದು ಹೋದಲ್ಲಿ ಅಥವಾ ಬೇಡವಾದಲ್ಲಿ ಯಾವುದೇ ಕಾರಣಕ್ಕೂ ಬಾಕಿ ಮೊತ್ತವನ್ನು ಮರುಪಾವತಿಸುವುದಿಲ್ಲ ಮತ್ತು ಕಾರ್ಡನ್ನು ಹಿಂದಕ್ಕೆ ಪಡೆಯುವುದಿಲ್ಲ.
2. ಪ್ರಯಾಣಿಕರು ನಿಲ್ದಾಣದಿಂದ ಹೊರಗೆ ಬರುವಾಗ Tap out ಮಾಡದೇ ಹೊರಬಂದಲ್ಲಿ ಕಾರ್ಡ್ ಲಾಕ್ ಆಗುವುದು.
3. ಲಾಕ್ ಆದ ಕಾರ್ಡನ್ನು ಮತ್ತೆ ರೂ. 26/– ದಂಡ ಶುಲ್ಕವಾಗಿ ಬಿಆರ್‌ಟಿಎಸ್ ಬಸ್ ನಿಲ್ದಾಣಗಳಲ್ಲಿ ಪಾವತಿಸಿ ತಮ್ಮ ಸ್ಮಾರ್ಟಕಾರ್ಡನ್ನು ಚಾಲ್ತಿ ಮಾಡಿಸಿಕೊಳ್ಳಬಹುದು.
4. ಪ್ರಯಾಣಿಕರು ಬಿಆರ್‌ಟಿಎಸ್ ಬಸ್ ನಿಲ್ದಾಣದ ಒಳಗೆ ಪ್ರವೇಶಿಸಿ ಅದೇ ಬಸ್ ನಿಲ್ದಾಣದಿಂದ ಹೊರಗೆ ಬರುವುದು ಅನಿವಾರ್ಯವಾದಲ್ಲಿ 15 ನಿಮಿಷದ ಒಳಗಡೆ ಹೊರಗೆ ಬಂದಲ್ಲಿ ರೂ. 5/– ಹಾಗೂ 15 ನಿಮಿಷ ಮೀರಿ ಅದೇ ಬಸ್ ನಿಲ್ದಾಣದಿಂದ ಹೊರಬಂದಲ್ಲಿ ರೂ. 26/– ಗಳು ತಮ್ಮ ಸ್ಮಾರ್ಟಕಾರ್ಡಲ್ಲಿ ಕಡಿತವಾಗುವುದು.
5. ಪ್ರಯಾಣಿಕರು ಬಿಆರ್‌ಟಿಎಸ್ ಬಸ್ ನಿಲ್ದಾಣದ ಒಳಗೆ ಪ್ರವೇಶಿಸಿ ಮತ್ತೊಂದು ಬಸ್ ನಿಲ್ದಾಣದಿಂದ ಹೊರಗೆ ಬರುವ ಸಮಯ 2

E-mail: hdbrts@gmail.com https : //facebook.com/HubliDharwadBRTS https : //instagram.com/hubballi_dharwad_brts